# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 478 |
| ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು ( ವಿಧಾನಸಭಾ ಕ್ಷೇತ್ರ ) |
| ಉತ್ತರಿಸಬೇಕಾದ ದಿನಾಂಕ | 30.01.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ತೆಲೆಮಾರುಗಳಿಂದ ಸ್ಥಾಪಿತವಾಗಿರುವ ಗೊಲ್ಲರಹಟ್ಟಿ ಗ್ರಾಮಗಳಲ್ಲಿ ವಾಸಿಸುವ ಕಾಡುಗೊಲ್ಲರು ಸಾಮಾಜಿಕವಾಗಿ-ಶೈಕ್ಷಣಿಕವಾಗಿ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತೀ ಹಿಂದುಳಿದಿದ್ದು, ಹಲವಾರು ವರ್ಷಗಳಿಂದ ಈ ಸಮುದಾಯವನ್ನು ಅಲೇಮಾರಿ ಮತ್ತು ಅರೇಅಲೇಮಾರಿ ವರ್ಗಕ್ಕೆ ಸೇರಿಸುವ ಬೇಡಿಕೆ ಇದ್ದು, ಸರ್ಕಾರ ಈ ಕುರಿತು ಕೈಗೊಂಡಿರುವ ಕ್ರಮವೇನು; | ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ ರವರ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಕಾಡುಗೊಲ್ಲ (ಅಡವಿಗೊಲ್ಲ) ಮತ್ತು ಹಟ್ಟಿಗೊಲ್ಲ ಸಮುದಾಯಗಳನ್ನು ಒಳಗೊಂಡಂತೆ ಅಲೆಮಾರಿ/ಅರೆ-ಅಲೆಮಾರಿ ಪಟ್ಟಿಗೆ ಸೇರ್ಪಡೆ ಮಾಡುವ ಕುರಿತಂತೆ ಒಟ್ಟು 17 ಸಲಹೆ / ಶಿಫಾರಸ್ಸುಗಳನ್ನೊಳಗೊಂಡ ಪ್ರಥಮ ವರದಿ 2022ನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಪರಿಶೀಲನೆಯಲ್ಲಿರುತ್ತದೆ.<br><br>ರಾಜ್ಯದ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಕಲ್ಪಿಸಿರುವ ಮೀಸಲಾತಿಯನ್ನು ಮರು ವರ್ಗೀಕರಿಸಿರುವ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 135 ಬಿಸಿಎ 2023, ದಿನಾಂಕ:27.03.2023 ರ ಆದೇಶವನ್ನು ಪ್ರಶ್ನಿಸಿ ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 435/2023 ಮತ್ತು 468/2023 ಪ್ರಕರಣಗಳು ದಾಖಲಾಗಿರುತ್ತವೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ, ದಿನಾಂಕ:25.04.2023ರಂದು ನಡೆದ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ರಾಜ್ಯ ಸರ್ಕಾರವನ್ನು ಪ್ರತಿನಿಧಿಸುತ್ತಿರುವ Solicitor General ರವರು ಪರಿಷ್ಕೃತ ಪುನರ್ ವರ್ಗೀಕರಣದ ಆದೇಶ ಸಂಖ್ಯೆ: ಹಿಂವಕ 135 ಬಿಸಿಎ 2023, ದಿನಾಂಕ:27.03.2023ರ ಆದೇಶವನ್ನು ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಅಳವಡಿಸಿಕೊಳ್ಳಲಾಗುವುದಿಲ್ಲವೆಂದು ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002ನ್ನು ಮುಂದುವರೆಸಲಾಗುವುದು ಎಂಬ ಹೇಳಿಕೆಯನ್ನು ದಾಖಲಿಸಿರುತ್ತಾರೆ. (Statement of Record) |

| | | |
|---|---|---|
| | | ದಿನಾಂಕ:27.03.2023 ರ ಸರ್ಕಾರದ ಆದೇಶವನ್ನು ಪ್ರಶ್ನಿಸಿ ರಾಜ್ಯ ಉಚ್ಛ ನ್ಯಾಯಾಲಯದ ರಿಟ್ ಫಿಟಿಷನ್ ಸಂಖ್ಯೆ: 7586/2023 ಹಾಗೂ 8976/2023ರಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ. ರಿಟ್ ಫಿಟಿಷನ್ ಸಂಖ್ಯೆ: 26045/2022 (GM-RES) PIL ಶ್ರೀ ಡಿ.ಜಿ. ರಾಘವೇಂದ್ರ ವಿರುದ್ಧ, ಕರ್ನಾಟಕ ಸರ್ಕಾರ ಪ್ರಕರಣದಲ್ಲಿ ರಾಜ್ಯ ಸರ್ಕಾರವು ದಿನಾಂಕ:23.03.2002ರಂದು ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002ರ ಆದೇಶ ಪ್ರವರ್ಗ-II (ಎ) ಗೆ ಮೀಸಲಾತಿ ಪ್ರಮಾಣದ ಬದಲಾವಣೆ ಮತ್ತು ಯಾವುದೇ ಸಮುದಾಯಗಳನ್ನು ಪ್ರವರ್ಗ-II (ಎ)ಗೆ ಸೇರಿಸುವುದು ಅಥವಾ ಕೈಬಿಡುವುದನ್ನು ಮಾನ್ಯ ಉಚ್ಛ ನ್ಯಾಯಾಲಯದ ಮುಂದಿನ ಅನುಮತಿ ಇಲ್ಲದೆ ಜಾರಿಗೊಳಿಸುವುದಿಲ್ಲವೆಂದು Compliance/undertaking affidavit ನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.<br><br>ಪ್ರಕರಣಗಳು ಮಾನ್ಯ ಘನ ಸರ್ವೋಚ್ಛ ನ್ಯಾಯಾಲಯದಲ್ಲಿ ಹಾಗೂ ಉಚ್ಛ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತವೆ. ನ್ಯಾಯಾಲಯಗಳಲ್ಲಿ ಪ್ರಕರಣಗಳು ಇತ್ಯರ್ಥವಾದ ನಂತರ ಪರಿಶೀಲಿಸಿ ಕ್ರಮವಹಿಸಲಾಗುತ್ತದೆ. |
| ಆ) | ಈ ಸಮುದಾಯವನ್ನು ಅಲೇಮಾರಿ ಮತ್ತು ಅರೇಅಲೇಮಾರಿ ವರ್ಗಕ್ಕೆ ಸೇರಿಸದೇ ಇರುವುದರಿಂದ ಯಾವುದೇ ಸವಲತ್ತುಗಳು (ಅಲೇಮಾರಿ ಮತ್ತು ಅರೇಅಲೇಮಾರಿ ವರ್ಗಕ್ಕೆ ಸರ್ಕಾರದಿಂದ ಸಿಗುವ ಮನೆಗಳು, ಶಿಕ್ಷಣ ಇಲಾಖೆಗಳಲ್ಲಿ ಮಿಸಲಾತಿಗಳು ಇನ್ನಿತರೆ ಸವಲತ್ತುಗಳು) ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಾಡುಗೊಲ್ಲ ಸಮುದಾಯವು ಹಿಂದುಳಿದ ವರ್ಗಗಳ ಪ್ರವರ್ಗ-1ಕ್ಕೆ ಸೇರಿದ್ದು, ಪ್ರವರ್ಗ-1 ರಡಿಯ ಮೀಸಲಾತಿಗಳು ಹಾಗೂ ಸವಲತ್ತುಗಳನ್ನು ಪಡೆಯುತ್ತಿರುತ್ತಾರೆ. |
| ಇ) | ರಾಜ್ಯದಲ್ಲಿ ಇಲ್ಲಿಯವರೆಗೆ ಯಾವ ಜಾತಿ / ಸಮುದಾಯಗಳಿಗೆ ಯಾವ ಯಾವ ನಿಗಮಗಳನ್ನು ಸ್ಥಾಪಿಸಲಾಗಿದೆ; ಈ ನಿಗಮಗಳಿಗೆ ವಾರ್ಷಿಕವಾಗಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗುತ್ತಿದೆ; | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ವಿವಿಧ ಜಾತಿ/ಸಮುದಾಯಗಳ ಅಭಿವೃದ್ಧಿಗಾಗಿ ಸ್ಥಾಪಿಸಲಾದ ನಿಗಮಗಳು ಹಾಗೂ ಸದರಿ ನಿಗಮಗಳಿಗೆ ವಾರ್ಷಿಕವಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ. |

**ಈ)** ಸದರಿ ನಿಗಮಗಳಿಗೆ ಸರ್ಕಾರದಿಂದ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ ಮತ್ತು ಎಷ್ಟು ಹುದ್ದೆಗಳು ಖಾಲಿ ಇವೇ? (ಮಾಹಿತಿ ನೀಡುವುದು )

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 11 ನಿಗಮಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ನಿಗಮಗಳಲ್ಲಿ ಮಂಜೂರಾದ ಹುದ್ದೆ ಮತ್ತು ಭರ್ತಿಯಾದ ಹುದ್ದೆ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

<table>
<tr><th>ಕ್ರ. ಸಂ</th><th>ನಿಗಮಗಳ ಹೆಸರು</th><th>ಮಂಜೂರಾದ ಹುದ್ದೆ ಗಳು</th><th>ಭರ್ತಿ ಹುದ್ದೆ ಗಳು</th><th>ಖಾಲಿ ಹುದ್ದೆ ಗಳು</th></tr>
<tr><td>1</td><td>ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ.</td><td>392</td><td>171</td><td>221</td></tr>
<tr><td>2</td><td>ಕರ್ನಾಟಕ ಒಕ್ಕಲಿಗ ಸಮುದಾಯಗಳ ಅಭಿವೃದ್ಧಿ ನಿಗಮ.</td><td>14</td><td>02</td><td>12</td></tr>
<tr><td>3</td><td>ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ</td><td>06</td><td>02</td><td>04</td></tr>
<tr><td>4</td><td>ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ.</td><td>09</td><td>01</td><td>08</td></tr>
<tr><td>5</td><td>ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ.</td><td>08</td><td>01</td><td>07</td></tr>
<tr><td>6</td><td>ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ.</td><td>14</td><td>03</td><td>11</td></tr>
<tr><td>7</td><td>ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ.</td><td>06</td><td>01</td><td>05</td></tr>
<tr><td>8</td><td>ಕರ್ನಾಟಕ ರಾಜ್ಯ ಕಾಡುಗೊಲ್ಲ ಅಭಿವೃದ್ಧಿ ನಿಗಮ</td><td>08</td><td>01</td><td>07</td></tr>
<tr><td>9</td><td>ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ.</td><td colspan="3" rowspan="3">ಈ 03 ನಿಗಮಗಳಿಗೆ ಯಾವುದೇ ಹುದ್ದೆಗಳು ಮಂಜೂರಾಗಿರುವುದಿಲ್ಲ. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧಿಕಾರಿ / ನೌಕರರೇ ಸದರಿ ನಿಗಮಗಳ ಕರ್ತವ್ಯ ನಿರ್ವಹಿಸುತ್ತಿದ್ದಾರೆ.</td></tr>
<tr><td>10</td><td>ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ.</td></tr>
<tr><td>11</td><td>ಕರ್ನಾಟಕ ಅಲೆಮಾರಿ ಅರೆ ಅಲೆಮಾರಿ ಅಭಿವೃದ್ಧಿ ನಿಗಮ.</td></tr>
</table>

**ಸಂಖ್ಯೆ: ಹಿಂವಕ 34 ಬಿಸಿಎ 2026**

**(ಶಿವರಾಜ. ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

# ಅನುಬಂಧ

## ಹಿಂದ ಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಸ್ಥಾಪಿಸಲಾಗಿರುವ ನಿಗಮಗಳಿಗೆ ವಾರ್ಷಿಕವಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ

(ಕೋಟಿ ರೂ.ಗಳಲ್ಲಿ)

| ಕ್ರ. ಸಂ | ನಿಗಮಗಳ ಹೆಸರು | 2013-24 | 2014-15 | 2015-16 | 2016-17 | 2017-18 | 2018-19 | 2019-20 | 2020-21 | 2021-22 | 2022-23 | 2023-24 | 2024-25 | 2025-26 |
|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 14 |
| 1 | ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | 134.31 | 134.31 | 150.00 | 229.67 | 379.17 | 265.17 | 165.00 | 80.00 | 260.00 | 200.00 | 100.00 | 100.00 | 374.78 |
| 2 | ಕರ್ನಾಟಕ ಉಪ್ಪಾರ ಸಮುದಾಯಗಳ ಅಭಿವೃದ್ಧಿ ನಿಗಮ | Establishd During 2017-18 | | | | 5.00 | 2.00 | 8.00 | 5.29 | 6.79 | 15.00 | 8.00 | 8.00 | 29.28 |
| 3 | ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ | Establishd During 2014-15 | 5.00 | 15.00 | 20.00 | 25.00 | 19.00 | 25.00 | 10.00 | 10.00 | 25.00 | 13.00 | 13.00 | 48.72 |
| 4 | ಕರ್ನಾಟಕ ನಿಜಶರಣರ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ | Establishd During 2017-18 | | | | 5.00 | 2.00 | 8.00 | 25.00 | 10.75 | 25.00 | 9.00 | 5.00 | 18.74 |
| 5 | ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ | Establishd During 2019-20 | | | | | | 25.00 | 0.29 | 5.29 | 16.00 | 12.00 | 12.00 | 44.97 |
| 6 | ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ | Establishd During 2020-21 | | | | | | | 100.00 | 0.01 | 100.01 | 60.00 | 60.00 | 224.87 |
| 7 | ಕರ್ನಾಟಕ ಒಕ್ಕಲಿಗ ಸಮುದಾಯಗಳ ಅಭಿವೃದ್ಧಿ ನಿಗಮ | Establishd During 2021-22 | | | | | | | | 50.00 | 60.00 | 60.00 | 60.00 | 224.87 |
| 8 | ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ | Establishd During 2021-22 | | | | | | 2.00 | 0.00 | 5.00 | 10.00 | 5.00 | 5.00 | 18.74 |
| 9 | ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ | Establishd During 2021-22 | | | | | | 25.00 | 0.00 | 5.00 | 15.00 | 9.00 | 9.00 | 33.73 |
| 10 | ಕರ್ನಾಟಕ ರಾಜ್ಯ ಕಾಡುಗೊಲ್ಲ ಅಭಿವೃದ್ಧಿ ನಿಗಮ | Not Established | | | | | | | | | 20.00 | 10.00 | 15.00 | 56.22 |
| 11 | ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ | Establishd During 2022 | | | | | | | | | 70.00 | 50.00 | 50.00 | 187.39 |
| | ಒಟ್ಟು | **134.31** | **139.31** | **165.00** | **249.67** | **414.17** | **288.17** | **258.00** | **220.58** | **352.84** | **556.01** | **336.00** | **337.00** | **1262.3** |

ಷರಾ:-2025-26ನೇ ಸಾಲಿಗೆ ಹಂಚಿಕೆಯಾದ ಅನುದಾನದಲ್ಲಿ ಮೊದಲನೇ ಕಂತಿನ ಹಣವನ್ನು ಮಾತ್ರ ಬಿಡುಗಡೆ ಮಾಡಲಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು